**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.192/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಅಯಾಜ್ ಅಲೀ | ಫ್ರಾಸಾ-5 |
| ತಂದೆಯ ಹೆಸರು | : ಮೊಹಮ್ಮದ್ | ಚಾಸಾ-7 |
| ವಯಸ್ಸು | : 44 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 29.08.2025 |
| ವಾಸಸ್ಥಳ | : ಬಿದರಹಳ್ಳಿ | |

**:ಮುಖ್ಯ ವಿಚಾರಣೆ: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಮೃತ ಮಂಜುನಾಥ್ ಹಾಗೂ ಚಾಸಾ-1 ರಿಂದ 3 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-3 ರ ಫೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಲಾಯಿತು.

ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಘಟನೆಯ ಪ್ರತ್ಯಕ್ಷ ದರ್ಶಿಯಲ್ಲ. 3 ವರ್ಷದ ಹಿಂದೆ ನಾನು ಬಿದರಹಳ್ಳಿಯಲ್ಲಿ ಇರುವಾಗ ಪೋಲಿಸರು ನಮ್ಮ ಸಹಿಗಳನ್ನು ಪಡೆದು, ಫೋಟೋಗಳನ್ನು ತೆಗೆದಿದ್ದಾರೆ. ಯಾವ ವಿಚಾರಾಕ್ಕೆ ನಮ್ಮ ಸಹಿಯನ್ನು ಪಡೆದು ಫೋಟೋಗಳನ್ನು ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಸ್ಥಳವನ್ನು ತೋರಿಸಿಲ್ಲ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ಈಗ ಓದಿ ಹೇಳಿದಂತೆ ದಿ.14.11.2023 ರಂದು ಮೂಡಿಗೆರೆ ಪೋಲಿಸರ ಮುಂದೆ ನನ್ನ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.